


ಕಥೆ ಮತ್ತು ಚಿತ್ರ : ಪಿ. ಪುರುಷೋತ್ತಮ ಕಾರಂತ್

ಒಂದು ಊರು. ಆ ಊರಿನ ಅರಸನಿಗೆ ಕತೆಯನ್ನು ಕೇಳುವ ಹುಚ್ಚು. ಹೀಗಾಗಿ ಆ ರಾಜನ ಮಂತ್ರಿಯು ಪ್ರತಿನಿತ್ಯ ಕತೆಯೊಂದನ್ನು ಹೇಳಲೇ ಬೇಕಿತ್ತು. ದೊರೆಯು ತನ್ನ ಕೆಲಸದ ನಡುವೆ ಕತೆಯನ್ನು ಆಲಿಸುತ್ತಿದ್ದ. ಮಂತ್ರಿ ದೊರೆಯನ್ನು ಕುರಿತು, "ಮಹಾರಾಜ ಕತೆಯನ್ನು ಕೇಳುವವರು ಹ್ಞೂ ಅನ್ನಬೇಕಲ್ಲ! ನಾ ಹೇಳುವುದನ್ನೆಲ್ಲ ಅರ್ಥ ಮಾಡಿಕೊಂಡು ತಾವು ಹ್ಞೂ ಅನ್ನಬೇಕು. ಬರಿದೆ ಕತೆ ಹೇಳಿದರೆ ವ್ಯರ್ಥ'' ಎಂದನು. ಮಂತ್ರಿಯ ಸಲಹೆಗೆ "ಸರಿ. ನಿನ್ನ ಮಾತನ್ನು ನಾನು ಒಪ್ಪುತ್ತೇನೆ, ನೀನು ಕತೆಯನ್ನು ಆರಂಭಿಸು'', ಎಂದ ರಾಜ. "ಒಂದು ಊರಿನಲ್ಲಿ ಒಬ್ಬ ಧನಿಕನಿದ್ದ. ಆ ಧನಿಕನಿಗೆ ಇಬ್ಬರು ಗಂಡು ಮಕ್ಕಳಿದ್ದರು.'' "ಹ್ಞೂ'' ಅರಸನೆಂದ. "ಆ ಧನಿಕನು ವೃದ್ಧನಾಗಿ ಅಸುನೀಗಿದನು.'' "ಹ್ಞೂ'' "ಆ ಧನಿಕನ ಮಕ್ಕಳಿಬ್ಬರೂ ತಂದೆಯ ಆಸ್ತಿಯನ್ನು ಒಡೆದು ಪಾಲುಗೈದರು''. "ಹ್ಞೂ'' "ಹಣ, ಒಡವೆಗಳು, ನೆಲ ಹೊಲ ಎಲ್ಲವೂ ಎರಡು ಪಾಲಾಯ್ತು.'' "ಹ್ಞೂ'' "ಪುಷ್ಕರಣಿಯಂತಹ ಬಾವಿಯೂ ಹೋಳಾಯ್ತು.'' "ಹ್ಞೂ'' "ಅರಸನೇ ಕೇಳು, ದೊಡ್ಡ ಮಗನು ಬಾವಿಯ ಒಂದರ್ಧವನ್ನು ತನ್ನ ಗಾಡಿಯಲ್ಲಿ, ಬಾವಿಯ ಇನ್ನೊಂದರ್ಧವನ್ನು ಚಿಕ್ಕ ಮಗನು ತನ್ನ ಗಾಡಿಯಲ್ಲಿ ಕೊಂಡೊಯ್ದರು.'' "ಹ್ಞೂ'' ಆಗ ಮಂತ್ರಿಯು "ಅರಸ, ಬಾವಿ ಹೋಳಾಯಿತೆಂದರೂ ಹ್ಞೂಗೊಡುವೆಯಲ್ಲ! ಸಾಕು, ಸಾಕು ಈ ಕತೆಯ ವ್ಯಥೆ!'' ಎಂದು ನಿಟ್ಟುಸಿರುಬಿಟ್ಟು "ನಿನಗೆ ಕತೆ ಹೇಳಿ ಏನು ಪುರುಷಾರ್ಥ! ಇದೆಲ್ಲ ವ್ಯರ್ಥಾಲಾಪ ಅಷ್ಟೆ!'' ಎಂದು ಉದ್ಗರಿಸಿದನು. ಆಗ ರಾಜನು ತನ್ನ ಮಂತ್ರಿಗೆ "ಕೇಳಯ್ಯ, ಮಹಾಸಚಿವ! ಇದರರ್ಥ ನಿನಗೆ ತಿಳಿದಿಲ್ಲ! ಲೋಕದೊಳಗೆ ಇಂತಹ ಅನರ್ಥಗಳು ಅದೆಷ್ಟೊ ಆಗಿಹೋಗಿವೆ, ಆಗುತ್ತಿವೆ. ಆದರೆ ಇವುಗಳೆಲ್ಲದರ ಸೂಚ್ಯಾರ್ಥ ತಿಳಿಯಲು ಸಂಯಮ ಬೇಕು, ಅಷ್ಟೇ!'' ಎಂದನು.



**ನೀತಿ:**

ಪ್ರಾಪಂಚಿಕತೆಯಿಂದ ತುಂಬಿರುವ ಜನರ ವರ್ತನೆಯಲ್ಲಿ ನೀನು ಏನನ್ನು ಕಂಡರೂ ಆಶ್ಚರ್ಯ ಪಡದಿರು, ಎಂಬ ಹಿತನುಡಿಯನ್ನು ವಿಶ್ವನಾಥದತ್ತ ತನ್ನ ಮಗ ನರೇಂದ್ರನಿಗೆ (ಮುಂದೆ ಸ್ವಾಮಿ ವಿವೇಕಾನಂದ) ಹೇಳಿದುದನ್ನು ಇಲ್ಲಿ ಸ್ಮರಿಸಬಹುದು.